(7) ಉಡುಪಿ ಆಸ್ಪತ್ರೆಯ ಪರಿಸ್ಥಿತಿಯ ಬಗ್ಗೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಉಡುಪಿಯಲ್ಲಿರುವ ಸರ್ಕಾರೀ ಆಸ್ಪತ್ರೆಯಲ್ಲಿ ರೋಗಿಗಳಿಗೆ ಒದಗಿಸಿದ ಆಹಾರದ ಬಾಬ್ತು ಗುತ್ತಿಗೆದಾರರಿಗೆ ಹಿಂದಿನ ವರ್ಷಗಳ ಬಾಕಿ ರೂಪಾಯಿ ಲಕ್ಷಕ್ಕೂ ಹೆಚ್ಚು ಬಾಕಿಯಿರಿಸಿರುವುದರಿಂದ ಇದೀಗ ಗುತ್ತಿಗೆದಾರರು ಮುಂದಿನ ತಿಂಗಳಿಂದ ಆಹಾರ ಸರಬರಾಜು ಮಾಡಲು ಅಸಾಧ್ಯ ಎಂದು ತಿಳಿಸಿರುವುದರಿಂದ ರೋಗಿಗಳಿಗೆ ಬಹಳಷ್ಟು ತೊಂದರೆಯಾಗಿದೆ. ಈ ಬಗ್ಗೆ ಸಾಕಷ್ಟು ಮನವಿ ಸಲ್ಲಿಸಿದ್ದರೂ ಈ ಹಳೇ ಬಾಕಿಯನ್ನು ಯಾವಾಗ ಪಾವತಿ ಮಾಡುತ್ತೀರಿ ಮತ್ತು ಈ ನಿಧಾನಗತಿಗೆ ಕಾರಣವನ್ನು ತಿಳಿಸುವಿರಾ? ಅದರ ಜೊತೆಗೆ 2 ಎಕ್ಸರೆ ಯಂತ್ರದಲ್ಲಿ ಒಂದು ದೊಡ್ಡ ಯಂತ್ರ ಹಾಳಾಗಿದ್ದು ಕಳೆದ ಒಂದೂವರೆ ವರ್ಷಗಳಿಂದ ರಿಪೇರಿ ಮಾಡದೇ ಇರುವುದರಿಂದ ರೋಗಿಗಳಿಗೆ ಬಹಳ ತೊಂದರೆಯುಂಟಾಗಿದೆ. ಇದನ್ನು ಯಾವಾಗ ರಿಪೇರಿ ಮಾಡುವಿರಿ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಪರವಾಗಿ) : ಸರ್ಕಾರವು ನಿಗದಿಪಡಿಸಿರುವ ಪಥ್ಯಾಹಾರದ ಪ್ರಕಾರ ಒಂದು ದಿನಕ್ಕೆ ಒಬ್ಬ ರೋಗಿಗೆ ಅಂದಾಜು ರೂ. 5.50 ಒದಗಿಸಲಾಗಿದೆ. ಆದರೆ, ಉಡುಪಿ ಆಸ್ಪತ್ರೆಯಲ್ಲಿ ಊಟದ ಜೊತೆಗೆ ಹಳೇ ಮದ್ರಾಸ್ ಪ್ರಾಂತ್ಯದ ನಿಯಮಾನುಸಾರ ಒಂದು ದಿನದ ಊಟಕ್ಕೆ ಒಬ್ಬ ರೋಗಿಗೆ ಸುಮಾರು ರೂ. 20.00ರಿಂದ ರೂ. 23.00 ರವರೆಗೆ ಖರ್ಚಾಗುತ್ತದೆ. (ಮಾರುಕಟ್ಟೆ ದರದಂತೆ). ಆದ್ದರಿಂದ, ಸರ್ಕಾರವು ಒದಗಿಸಿರುವ ಆಯವ್ಯಯ ಅನುದಾನಕ್ಕಿಂತ ವೆಚ್ಚವು ಹೆಚ್ಚಾಗಿರುತ್ತದೆ. ಆದಕಾರಣ, ಈ ಆಸ್ಪತ್ರೆಯಲ್ಲಿ ಆಹಾರ ಸರಬರಾಜು ಗುತ್ತಿಗೆದಾರರಿಗೆ ಮಾಡಬೇಕಾದ ಪಾವತಿಯು ಬಾಕಿ ಉಳಿಯುತ್ತಾ ಬಂದಿದೆ. ಸರ್ಕಾರದಿಂದ 1995-96ನೇ ಸಾಲಿನ ಆಯವ್ಯಯ ಅನುದಾನದ ಎರಡನೇ ಅರ್ಧವಾರ್ಷಿಕ ಲೇಖಾನುದಾನ ಮಂಜೂರಾತಿ ಪಡೆದ ನಂತರ ಹಳೇ ಬಿಲ್ಲುಗಳನ್ನು ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಉಡುಪಿ ಆಸ್ಪತ್ರೆಯಲ್ಲಿ ಕೆಟ್ಟಿರುವ ಕ್ಷ-ಕಿರಣ ಯಂತ್ರದ ದುರಸ್ತಿಗಾಗಿ ದಿನಾಂಕ 5-8-1995 ರಂದು ರೂ. 1,36,000.00ಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಯಂತ್ರದ ದುರಸ್ತಿಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

(8) ಹೊಸಕೆರೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಹೊಸಕೆರೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ ಕಟ್ಟಡದ ಶಂಕುಸ್ಥಾಪನೆಯಾಗಿರುತ್ತದೆ, ಹಾಗೂ ಇದಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು ಇದುವರೆವಿಗೂ ಈ ಬಗ್ಗೆ ಯಾವುದೇ ಕ್ರಮ ಕೈಕೊಂಡಿರುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) : ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜಾರಾಗಿದ್ದು ಇದರ ಕಟ್ಟಡ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯನ್ನು ಈಗಾಗಲೇ ನೀಡಲಾಗಿದೆ.

ತುಮಕೂರು ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಆಯವ್ಯಯದ ಹಣದ ಲಭ್ಯತೆಯನ್ನು ಆಧರಿಸಿ 1995-96ರ ಸಾಲಿನಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.